## ಕೃತಕ ನೀಳವೇಣಿ

ಗುಂಡ: ಪ್ರಿಯೆ ಇಂದು ಸಂಜೆ ಪೂರ್ತಿ ನಿನ್ನ ನೀಳಗೂದಲನ್ನು ಸವರುತ್ತ ಸೂರ್ಯಾಸ್ತ ವೀಕ್ಷಿಸುವ ಆಸೆ ನನಗೆ.

ಸುಬ್ಬಿ: ಅಯ್ಯೋ, ಬರೀ ಸಂಜೆಯೇಕೆ? ರಾತ್ರಿಯಿಡೀ ನೇವರಿಸುತ್ತಾ ಇರಿ, ಎಂದವಳು ತನ್ನ ಕೃತಕ ನೀಳಗೂದಲನ್ನು ಬಿಚ್ಚಿ ಅವನ ಕೈಗಿತ್ತಳು.

***

## ದೀರ್ಘಾಯಸ್ಸಿನ ಗುಟ್ಟು

ಶತಾಯುಷಿ ರಂಗಜ್ಜಿಗೆ ಪತ್ರಕರ್ತರು ಹೀಗೆ ಪ್ರಶ್ನಿಸಿದರು.

ಪತ್ರಕರ್ತ: ನಿಮ್ಮ ದೀರ್ಘಾಯಸ್ಸಿಗೆ ಏನು ಕಾರಣ ಅಜ್ಜಿ?

ಅಜ್ಜಿ: ಈಗಲೇ ಹೇಗೆ ಹೇಳಲಪ್ಪಾ? ನಾಲ್ಕೈದು ಲೇಹ್ಯ ಕಂಪನಿಯವರು ಮುಗಿಬಿದ್ದಿದ್ದಾರೆ, ಯಾರು ಹೆಚ್ಚು ಹಣ ಕೊಡುತ್ತಾರೋ, ಅವರ ಹೆಸರು ಹೇಳುತ್ತೇನೆ!

***




## ಬೈಕ್‌ನಿಂದ ಬಿದ್ದದ್ದಕ್ಕೆ ಮದುವೆ ಕಾರಣ

(ಹೇಮಂತ ತಲೆಗೆ ಬಲವಾದ ಪೆಟ್ಟು ಮಾಡಿಕೊಂಡು ಬಂದಿದ್ದ)

ನರ್ಸ್: ಏಕೆ, ಬೈಕ್‌ನಿಂದ ಬಿದ್ದಿರಿ?

ಹೇಮಂತ: ಛೇ... ಛೇ... ನನಗೆ ಮದುವೆಯಾಗಿದೆ.

ನರ್ಸ್: (ಮಗುಮ್ಮಾಗಿ ಹೇಳಿದಳು) ಅರ್ಥವಾಯಿತು ಬಿಡಿ.

***

## ಫೈನಲ್ ಎಕ್ಸಾಂಗೆ ತಯಾರಿ!

ಮೊಮ್ಮಗ: ಯಾಕಜ್ಜಾ, ಯಾವಾಗಲೂ ಪುರಾಣದ ಪುಸ್ತಕಗಳನ್ನೇ ಓದ್ತಾ ಇರ್ತೀಯಾ?

ಅಜ್ಜ: ಫೈನಲ್ ಎಕ್ಸಾಂಗೆ ತಯಾರಾಗ್ತಿದೀನಿ ಕಣಪ್ಪಾ.

ಮೊಮ್ಮಗ: ಸೆಂಟರ್ ಎಲ್ಲಿ ಕೊಟ್ಟಿದ್ದಾರೆ ತಾತಾ?

ಅಜ್ಜ: ಮರಿ, ಬಹುಶಃ ವಿಕ್ಟೋರಿಯಾ ಆಸ್ಪತ್ರೆ ಇರಬೇಕು... ಗೊತ್ತಿಲ್ಲ.

***

## ಪ್ರೇಕ್ಷಕನ ಅಭಿಮತ

ಪತ್ರಕರ್ತ: ನಿಮ್ಮ ಹೊಸ ಸಿನೆಮಾದ ಬಗ್ಗೆ ಜನರ ಅಭಿಮತ ಹೇಗಿದೆ?

ಸಿನಿಮಾ ನಿರ್ದೇಶಕ: ಕೆಲವರಿಗೆ ಇಷ್ಟವಾಗಿದೆ, ಕೆಲವರಿಗೆ ಇಷ್ಟವಾಗಿಲ್ಲ.

ಪತ್ರಕರ್ತ: ಅಂದರೆ?

ಸಿನಿಮಾ ನಿರ್ದೇಶಕ: ನಮಗೆಲ್ಲ ತುಂಬಾ ಇಷ್ಟವಾಗಿದೆ. ಪ್ರೇಕ್ಷಕರಿಗೆ ಇಷ್ಟವಾಗಿಲ್ಲ.

***

## ಹೆಣ್ಣು ಗೊರಿಲ್ಲಾ ಒಪ್ಪಿಗೆ ಕೇಳಿ!

ಮೃಗಾಲಯದಲ್ಲಿ 2 ಗೊರಿಲ್ಲಾಗಳು ಮೂತಿಗೆ ಮೂತಿ ತಿಕ್ಕುತ್ತ ಪ್ರಣಯ ನಡೆಸಿದ್ದವು.

ಜಗದೀಶ: (ಪತ್ನಿಗೆ ಕೇಳಿದ) ನಾನೂ ಹಾಗೆ ಮಾಡಬಹುದೇ?

ಪತ್ನಿ: ಅದಕ್ಕೇನು, ಮಾಡಿ. ಆದರೆ ಆ ಹೆಣ್ಣು ಗೊರಿಲ್ಲಾ ಒಪ್ಪಿದರೆ ನನ್ನದೇನೂ ಅಭ್ಯಂತರವಿಲ್ಲ, ಅದನ್ನೆ ಕೇಳಿ!

***

## ಸಾಲದ ನೆನಪು

ಅವನು: ನಿನ್ನ ನೋಡಿದ ತಕ್ಷಣ ನನಗೆ ಹೇಮಂತ ನೆನಪಾಗ್ತಾನೆ.

ಇವನು: ಅದೇಕೆ? ಅವನು ದಪ್ಪ, ನಾನು ತೆಳ್ಳಗಿದ್ದೇನೆ.

ಅವನು: ಹೇಗಿದ್ದರೇನು? ಅವನು ಕೂಡ ನಿನ್ನಂತೆ ಹತ್ತು ಸಾವಿರ ಸಾಲ ಪಡೆದು ತಲೆ ತಪ್ಪಿಸಿ ತಿರುಗುತ್ತಿದ್ದಾನೆ.

***

## ಬೋರ್ಡ್ ತೆಗೆಯಲು ಕಾರಣ

ಕಾಳಿಂಗ: ಅಣ್ಣ, ಇಲ್ಲಿ ಈಜುವುದು ಅಪಾಯ ಎಂದು ಬೋರ್ಡ್ ಹಾಕಿದ್ದಿರಿ! ಈಗ ಕಾಣ್ತಾ ಇಲ್ಲವಲ್ಲ?

ಕಾವಲುಗಾರ: ಬೋರ್ಡ್ ಹಾಕಿದ ನಂತರ ಯಾರಿಗೂ ಅಪಾಯವಾಗಲಿಲ್ಲ, ಅದಕ್ಕೆ ತೆಗೆದುಬಿಟ್ಟೆವು!

***

## ಇಷ್ಟು ಮಕ್ಕಳಾ?

ಜನಗಣತಿಯವ: ಏನ್ಸಾರ್ ನೀವು ಕುಟುಂಬ ಯೋಜನಾ ಅಧಿಕಾರಿ ಅಂತೀರಾ! ನಿಮಗೆ 12 ಮಕ್ಕಳು ಇದ್ದಾರೆ.

ಕಾಮರಾಜ: ಹೌದು, ಕಳೆದ ವರ್ಷ ಈ ಇಲಾಖೆಗೆ ವರ್ಗವಾಗುವವರೆಗೂ ಕ್ಷೇತ್ರ ವಿಸ್ತರಣಾಧಿಕಾರಿಯಾಗಿದ್ದೆ!

***

## ದಾರಿ ತೋರಿಸಿ...

ಸುಮಂತ: ನಾನು ಬಡವ ಸಾರ್. ಬದುಕಿಗೆ ಏನಾದರೂ ದಾರಿ ತೋರಿಸಿ.

ಅಧಿಕಾರಿ: (ಹೊರಕ್ಕೆ ದಾರಿ ಬೋರ್ಡ್ ತೋರಿಸುತ್ತ) ಅಗೋ, ಅಲ್ಲಿದೆ ದಾರಿ. ಹೋಗುವಾಗ ಬಾಗಿಲು ಮುಚ್ಚಿಕೊಂಡು ಹೋಗು.

ಸಂಗ್ರಹ: ಕೆ. ಶ್ರೀನಿವಾಸರಾವ್,
ಹರಪನಹಳ್ಳಿ

